ಸಿ.ಸಿ .ನಂ.109/2023 ಪಿಡಬ್ಲೂಃ 1

ದಿನಾಂಕಃ 23-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀಮತಿ ಆರ್ ಜಿ ಎನ್ ವಕೀಲರಿಂದಃ**

6. ಆರೋಪಿ ಸಾಲ ಬಾಕಿಗೆ ಚೆಕ್ ನ್ನು ನೀಡಿದ್ದಾ ಎಂದು ಹೇಳುವ ಸಂದರ್ಭದಲ್ಲಿ 1,37,900/- ರೂಪಾಯಿ ಬಾಕಿ ಇತ್ತು . ಅಷ್ಟು ಹಣ ಬಾಕಿ ಇದೆ ಎಂದು ಅವರಿಗೆ ಯಾವುದೇ ದಾಖಲಾತಿ ಕೊಟ್ಟಿಲ್ಲ ಮೌಖಿಕವಾಗಿ ಹೇಳಿದ್ದೆವು . ಕಂಪ್ಯೂಟರ ಕಾಪಿಯನ್ನು ಆರೋಪಿಗೆ ಕೊಟ್ಟಿರಲಿಲ್ಲ ಬಾಕಿ ಇದೆ ಎಂದು ಹೇಳಿದ್ದೆವು. ಆ ದಿನಾಂಕದಂದು ಅಷ್ಟು ಹಣ ಬಾಕಿ ಇದೆ ಎಂದು ತೋರಿಸಲು ಸ್ಟೇಟ್ ಮೆಂಟ್ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇವೆ . ಸಾಕ್ಷಿ ಕೇಸಿನ ಕಡತದಲ್ಲಿರುವ ದಾಖಲಾತಿಯನ್ನು ನೋಡಿ ಸ್ಟೇಟ್ ಮೆಂಟ್ ಹಾಜರು ಪಡಿಸಿಲ್ಲ ಎಂದು ನುಡಿದಿರುತ್ತಾರೆ . ಸಾಲದ ಹಣವನ್ನು ಅವರ ಖಾತೆಗೆ ಜಮಾ ಪಡಿಸಿದ್ದೇವೆ . ಎಫ್ ಡಿ ಹಣ ತೆಗೆದುಕೊಂಡಿಲ್ಲ . ನಿಪಿ-2 ರಲ್ಲಿ ಬರದಂತಹ ಹಸ್ತಾಕ್ಷರಗಳು ನಮ್ಮ ಸಹಕಾರಿಯವರದ್ದು ಎಂದರೆ ಸರಿಯಲ್ಲ . ಆರೋಪಿ ಈಗಾಗಲೇ ಸಹಕಾರಿಗೆ ನೀಡಬೇಕಾದ ಹಣವನ್ನು ತುಂಬಿದ್ದಾರೆ ಎಂದರೆ ಸರಿಯಲ್ಲ. ಅಕೌಂಟ್ ಸ್ಟೇಟ್ ಮೆಂಟ್ ನಲ್ಲಿ ಅವರು ಎಷ್ಟು ಹಣ ತುಂಬಬೇಕು ಎಂದು ನಿಖರವಾಗಿ ಹೇಳಿಲ್ಲ ಅದು ಅಪೂರ್ಣವಾಗಿದೆ ಎಂದರೆ ಸರಿಯಲ್ಲ . ನಾವು ಹಾಜರು ಪಡಿಸಿದ ಲು ಸ್ಟೇಟ್ ಮೆಂಟ್ ಹಾಗೂ ಚೆಕ್ ನಲ್ಲಿ ತೋರಿಸಿದ ಮೊತ್ತ ಒಂದಕ್ಕೊಂದು ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಚೆಕ್ ಬೋನ್ಸ ಕೇಸ್ ಆಗುವ ತನಕ ಬಡ್ಡಿಯಾಗಿದೆ ಎಂದು ನುಡಿದಿರುತ್ತಾರೆ . ನಿಪಿ-2 ರಲ್ಲಿ ಮಾಡಿದಂತಹ ಸಹಿಗೂ ಹಾಗೂ ನಮ್ಮ ದಾಖಲಾತಿಗಳಲ್ಲಿ ಮಾಡಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ . ಚೆಕ್ ನಲ್ಲಿ ಬರದಂತಹ ಹಸ್ತಾಕ್ಷರಗಳ ಇಂಕು ಹಾಗೂ ಸಹಿ ಇಂಕು ಬೇರೆ ಬೇರೆ ಇದೆ ಎಂದರೆ ಸರಿಯಲ್ಲ . ಆರೋಪಿಯ ವಿರುದ್ಧ ಅಮಲ ಜಾರಿ ಕೇಸು ಮಾಡಿದ್ದೇವೆ . ಆ ಕೇಸಿನಲ್ಲಿ ಎಷ್ಟು ಹಣ ತುಂಬುತ್ತಿದ್ದಾರೆ ಎಂಬ ಬಗ್ಗೆ ದಾಖಲಾತಿ ಹಾಜರು ಪಡಿಸಲು ತೊಂದರೆ ಇಲ್ಲ . ಆ ರೀತಿ ದಾಖಲಾತಿ ಹಾಜರು ಪಡಿಸಿದರೆ

ಪಿಡಬ್ಲೂಃ 1

ಆರೋಪಿ ಚೆಕ್ ಹಣವನ್ನು ತುಂಬಿದ ಬಗ್ಗೆ ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ಅಮಲ ಜಾತಿ ಪ್ರಕರಣದಲ್ಲಿ ಸಂಪೂರ್ಣ ಹಣ ತುಂಬಿಕೊಂಡಿದ್ದರೂ ಆತನ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ ನ್ನು ಯಾರುಾ ಸಹ ನಮ್ಮ ಬ್ಯಾಂಕಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಶೈಕ್ಷಣಿಕವಾಗಿ ಎಷ್ಟು ವಿದ್ಯಾಭ್ಯಾಸ ಹೊಂದಿದ್ದಾರೆ ಗೊತ್ತಿಲ್ಲ. ಚೆಕ್ ನಲ್ಲಿರುವ ಬರವಣಿಗೆ ನಮ್ಮ ಸಿಬ್ಬಂದಿಯವರೇ ಬರೆದಿದ್ದಾರೆ ಎಂದರೆ ಸರಿಯಲ್ಲ . ನಾವು ನೀಡಿದ ನೋಟಿಸು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನೋಟಿಸು ಜಾರಿಯಾಗಿಲ್ಲ ಕಾರಣ ಎಡಿ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಎಡಿ ಕಾರ್ಡಿನಲ್ಲಿರುವಂತಹ ಸಹಿ ಹಾಗೂ ಚೆಕ್ ನಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿ. ಚೆಕ್ ನಲ್ಲಿ ನಮೂದಿಸಿದ ಹಣವನ್ನು ಆರೋಪಿ ನಮ್ಮ ಬ್ಯಾಂಕಿಗೆ ನೀಡಲು ಭಾಧ್ಯಸ್ಥನಲ್ಲ ಎಂದರೆ ಸರಿಯಲ್ಲ . ದಿಃ 16-10-2021ರಂದು ಇಂತಿಷ್ಟು ಹಣ ಬಾಕಿ ಇದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಮೌಖಿಕವಾಗಿ ಹೇಳಿದ್ದೇವೆ ಎಂದು ನುಡಿದಿರುತ್ತಾರೆ. ಕಾರಣ ನಾನು ಹೇಳಿದಷ್ಟು ಹಣ ಆರೋಪಿಯಿಂದ ಬರಲು ಬಾಕಿ ಇಲ್ಲ ಎಂದರೆ ಸರಿಯಲ್ಲ. ಕಟ್ ಬಾಕಿ ನೋಟಿಸಿನಲ್ಲಿ ಎಷ್ಟು ಹಣ ಬಾಕಿ ಇದೆ ನಮೂದು ಮಾಡಿದ್ದೇವೆ . ನಮ್ಮ ಬ್ಯಾಂಕಿನಿಂದ ಸುಮಾರು ಸಾರಿ ನೋಟಿಸು ಹೋಗಿದೆ ಹಾಗೂ ಮನೆಗೂ ಕೂಡ ಹೋಗಿ ಹೇಳಿ ಬಂದಿದ್ದೇವೆ. ಎಷ್ಟು ನೋಟಿಸು ಕಳಿಸಿದ್ದೇವೆ ನೆನಪಿಲ್ಲ . ನೋಟಿಸಿನಲ್ಲಿರುವ ಅಮೌಂಟು ಚೆಕ್ ನಲ್ಲಿರುವ ಅಮೌಂಟ್ ನ ಅಕೌಂಟ್ ಸ್ಟೇಟ್ ಮೆಂಟ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ಆರೋಪಿಯು ಯಾವುದೇ ಹಣವನ್ನು ನೀಡಲು ಭಾಧ್ಯಸ್ಥನಲ್ಲ ಆದರೂ ಸಾಲವನ್ನು ಪಡೆಯುವಾಗ ಭದ್ರತೆಗಾಗಿ ಪಡೆದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಕೇಸನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಆರೋಪಿ ಫಿರ್ಯಾದಿನಲ್ಲಿ ಹೇಳಿರುವ ಯಾವುದೇ ಗುನ್ಹೆ ಎಸಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಪಡೆದುಕೊಂಡಿದ್ದಾರೆ ಎನ್ನುವ ಹಣ ಈಗಾಗಲೇ ಚುಕ್ತಾ ಆಗಿದೆ ಎಂದರೆ ಸರಿಯಲ್ಲ.

ಪಿಡಬ್ಲೂಃ 1

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.